ದಿನಾಂಕಃ 23-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ಭದ್ರತೆಗಾಗಿ ನೀಡಿರುವ ದಾಖಲಾತಿಗಳನ್ನು ವಾಪಸ್ಸು ನೀಡುವಂತೆ ಕೋರಿ ದಿನಾಂಕ 05/05/2025 ರಂದು ವಕೀಲರ ಮೂಲಕ ತಿಳುವಳಿಕೆ ಪತ್ರ ಕಳುಹಿಸ್ದಿದರು ಎಂದರೆ ಸರಿ. ಸದರಿ ತಿಳುವಳಿಕೆ ಪತ್ರ ದಿನಾಂಕ 06/05/2025 ಜಾರಿಯಾಗಿರುತ್ತದೆ ಎಂದರೆ ಸರಿ. ಜಾರಿಯಾದ ನಂತರ ಆರೋಪಿಗೆ ದಾಖಲಾತಿಗಳನ್ನು ವಾಪಸ್ಸು ಪಡೆದುಕೊಳ್ಳುವಂತೆ ನಾವು ಕೇಳಿರುವುದಿಲ್ಲ. ಆರೋಪಿ ಚೀಟಿ ದಿನಾಂಕ 12/11/2023 ರಂದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. ಚೀಟಿ ಮುಗಿದ ನಂತರವು ಸಹ ಆರೋಪಿ ನೀಡಿರುವ ದಾಖಲಾತಿಗಳನ್ನು ವಾಪಸ್ಸು ನೀಡಿರುವುದಿಲ್ಲ ಎಂದರೆ ಸರಿ. ದಿನಾಂಕ 04/05/2025 ರಂದು ನಮ್ಮ ವ್ಯವಸ್ಥಾಪಕರ ವಿರುದ್ಧ ಆರೋಪಿ ಪೋಲಿಸ ದೂರು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

2) ಆರೋಪಿ ಚೀಟಿಯ ಭದ್ರತೆಗಾಗಿ ಆರೋಪಿ ಬ್ಯಾಂಕಿನ ಖಾತೆ ಹೊಂದಿರುವ ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ ಚೆಕ್ಕು ಸಂಖ್ಯೆಃ 080971, 080972 ಮತ್ತು 080973 ಚೆಕ್ಕುಗಳನ್ನು ನಮ್ಮ ಕಂಪನಿಗೆ ನೀಡಿದ್ದರು ಎಂದರೆ ಸರಿಯಲ್ಲ. 080971 ಚೆಕ್ಕು ಸಂಖ್ಯೆ ಆದಾರದ ಮೇಲೆ ಈ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿ. 080972 ಮತ್ತು 080973 ನಮ್ಮ ಕಂಪನಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಾವು ಈ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ಆರೋಪಿಗೆ ಸೇರಿದ ಚೆಕ್ಕುಗಳನ್ನು ವಾಪಸ್ಸು ನೀಡದ ಕಾರಣ ಆರೋಪಿ ತನ್ನ ಖಾತೆಯನ್ನು ಮುಚ್ಚಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ